ಸಹಕಾರ ಕೃಷಿ ಪತ್ತಿನ ಸಂಘಗಳ ಸಬಲತೆಯನ್ನು ಅವಲಂಬಿಸಿದೆ. ಈ ಕಾರಣದಿಂದ ಸಹಕಾರ ಕೃಷಿ ಪತ್ತಿನ ಸಂಘಗಳ ಸಬಲತೆಯನ್ನು ಅವಲಂಬಿಸಿದೆ. ಈ ಕಾರಣದಿಂದ ಸಹಕಾರ ಕೃಷಿ ಪತ್ತಿನ ಸಂಸ್ಥೆಗಳು ವ್ಯಾಪಾರ ಅಭಿವೃದ್ಧಿ ಯೋಜನೆ ಹಾಗೂ ಅಭಿವೃದ್ಧಿ ಕ್ರಿಯಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಸೂಚನೆಯನ್ನು ನೀಡಲಾಗಿದೆ.

ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕೃಷಿಕ ವಿಜ್ಞಾನ ಕೇಂದ್ರಗಳ ಸ್ಥಾಪನೆ

910 (1026) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕೃಷಿಕ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೆ;

ಆ) ಈ ಕೇಂದ್ರಗಳಿಂದ ರೈತರಿಗೆ ಆಗುವ ಪ್ರಯೋಜನಗಳೇನು;

ಇ) ಈ ಕೇಂದ್ರಗಳ ಸ್ಥಾಪನೆಯ ಅಂದಾಜು ವೆಚ್ಚ ಎಷ್ಟು; ಈ ಹಣವನ್ನು ಇಲಾಖೆ ಯಾವ ರೀತಿ ಕ್ರೋಢೀಕರಿಸಿತು?

ಈ) ಈವರೆಗೆ ಎಷ್ಟು ಕೃಷಿಕ ವಿಜ್ಞಾನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ?

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಮಂತ್ರಿಗಳು) :

ಅ) ಹೌದು

ಆ) ಈ ಕೇಂದ್ರಗಳಲ್ಲಿ ರೈತರಿಗೆ, ರೈತ ಮಹಿಳೆಯರಿಗೆ, ಗ್ರಾಮೀಣ ಯುವಕರಿಗೆ ಹಾಗೂ ವಿಸ್ತರಣಾ ಕಾರ್ಯಕರ್ತರಿಗೆ ವಿಜ್ಞಾನಿಗಳಿಂದ ತರಬೇತಿ ನೀಡಲಾಗುವುದು. ರೈತರ ಅನುಕೂಲಕ್ಕಾಗಿ ಕಾರ್ಯಾಗಾರಗಳನ್ನು ಹಾಗೂ ವಿಚಾರ ಸಂಕಿರಣಗಳನ್ನು ನಡೆಸಲಾಗುವುದು. ಸಮೂಹ ಮಾಧ್ಯಮಗಳಾದ ದೂರದರ್ಶನ, ಬಾನುಲಿ, ಹಾಗೂ ಪತ್ರಿಕೆಗಳ ಮುಖಾಂತರ ರೈತರಿಗೆ ಸಲಹೆ ನೀಡುವುದು, ಪ್ರಾತ್ಯಕ್ಷಿಕೆ, ಕ್ಷೇತ್ರಪ್ರಯೋಗ ಮತ್ತು ಕ್ಷೇತ್ರೋತ್ಸವಗಳನ್ನು ರೈತರರ ಜಮೀನುಗಳಲ್ಲಿ, ಸಂಶೋಧನಾ ಕೇಂದ್ರಗಳಲ್ಲಿ ಕೈಗೊಳ್ಳುವುದು, ಒಟ್ಟಾರೆ ರೈತರಿಗೆ ಬೇಕಾದ ಕೃಷಿ ತಾಂತ್ರಿಕ ಮಾಹಿತಿ, ವಿವಿಧ ವಿಸ್ತರಣಾ ಶಿಕ್ಷಣ ಪದ್ಧತಿಗಳ ಮೂಲಕ ವಿಜ್ಞಾನಿಗಳಿಂದ ದೊರಕಿಸುವುದು.

ಇ) ಈ ಕೇಂದ್ರಗಳ ಸ್ಥಾಪನೆಯ ಅಂದಾಜು ವೆಚ್ಚ 16 ರಿಂದ 17 ಲಕ್ಷ ರೂಪಾಯಿಗಳು. ಈ ಹಣವನ್ನು ಪೂರ್ತಿಯಾಗಿ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು, ನವದೆಹಲಿ ಇವರು ಭರಿಸುವರು.

ಈ) 18.

ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ

911(1027) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಖಾಸಗಿ ವಲಯದ ಸಹಕಾರದೊಡನೆ ರಾಜ್ಯದಲ್ಲಿ ಎಷ್ಟು ಶೈತ್ಯಾಗಾರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ?

ಆ) ಈವರೆಗೆ ಎಷ್ಟು ಶೈತ್ಯಾಗಾರಗಳನ್ನು ಸ್ಥಾಪಿಸಲಾಗಿದೆ.

ಇ) ಈ ಉದ್ದೇಶಕ್ಕಾಗಿ ಸರ್ಕಾರವು ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ.

ಈ) ಈ ಯೋಜನೆಯಡಿ ಎಷ್ಟು ಹಣವನ್ನು ಈ ವರೆಗೆ ಖಿಚುರ ಮಾಡಲಾಗಿದೆ?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) 100 ಶೀತಲ ಗೃಹಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

ಆ) ನಾಲ್ಕು

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ರಾಣೆಬೆನ್ನೂರು ತಾಲ್ಲೂಕಿನಲ್ಲಿ ರೈತ ಸಂಪರ್ಕ ಕೇಂದ್ರ ಸ್ಥಾಪನೆ

913 (1269) ಶ್ರೀ ಕೋಳಿವಾಡ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣೆಬೆನ್ನೂರು ತಾಲ್ಲೂಕಿನಲ್ಲಿ ಎಷ್ಟು ರೈತ ಸಂಪರ್ಕ ಕೇಂದ್ರ ಸ್ಥಾಪಿಸಲಾಗಿದೆ.

ಆ) ಪ್ರತಿ ಹೋಬಳಿಗೆ ಒಂದು ಕೇಂದ್ರವನ್ನು ಸ್ಥಾಪಿಸಲಾಗಿದೆಯೆ;

ಇ) ರಾಣೆಬೆನ್ನೂರು ತಾಲ್ಲೂಕಿನಲ್ಲಿ 3-4 ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರಕ್ಕೆ ಮನವಿ ಮಾಡಿಕೊಳ್ಳಲಾಗಿದೆಯೆ;

ಈ) ಹಾಗಿದ್ದಲ್ಲಿ ಈ ಕೇಂದ್ರಗಳನ್ನು ಸ್ಥಾಪಿಸಲು ಕೈಗೊಂಡ ಕ್ರಮ ಏನು?

ಶ್ರೀ ಟಿ. ಬಿ. ಜಯಚಂದ್ರ (ಕೃಷಿ ಸಚಿವರು) :

ಅ) 3 (ಮೂರು) ರೈತ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಆ) ಹೌದು.

ಇ) ಹೌದು, 2 ಹೆಚ್ಚುವರಿ ಕೇಂದ್ರಗಳ ಸ್ಥಾಪನೆಗೆ ಮನವಿಯು ಸ್ವೀಕೃತವಾಗಿದೆ.

ಈ) ಪ್ರಸಕ್ತ ಸಾಲಿನಲ್ಲಿ ಹೋಬಳಿಗೊಂದಂತೆ ರೈತ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಹೆಚ್ಚುವರಿ ಕೇಂದ್ರಗಳ ಸ್ಥಾಪನೆ ಕೋರಿ ಬಂದ ಮನವಿಗಳು ಸರ್ಕಾರದ ಪರಿಶೀಲನೆಯಲ್ಲಿದೆ.